ಗುಲ್ಬರ್ಗಾ ತಾಲ್ಲೂಕಿನ ಓಕಳಿ ಗ್ರಾಮದಲ್ಲಿ ಕೆರೆ ನಿರ್ಮಾಣ.

183 (314)

ಶ್ರೀ ರೇವುನಾಯ್ಕ ಬೆಳಮಗಿ (ಕಮಲಾಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ತಾಲ್ಲೂಕು ಓಕಳಿ ಗ್ರಾಮದ ಕೆರೆ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಮಂಜೂರಾತಿ ಎಂದು ನೀಡಲಾಗಿದೆ ಮತ್ತು ಇದರ ಅಂದಾಜು ವೆಚ್ಚ ಎಷ್ಟು?

ಇ) ಈ ಯೋಜನೆಗೆ ಒದಗಿಸಲಾಗಿರುವ ಗ್ರ್ಯಾಂಟ್ ಹಣ ಎಷ್ಟು; ಗ್ರ್ಯಾಂಟ್ ಹಣ ಕಡಿಮೆ ಆಗಿರುವುದರಿಂದ ಕಾಮಗಾರಿ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು): ಅ) ಪ್ರಸ್ತಾವನೆಯನ್ನು ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದ್ದು ಅನುಮೋದನೆ ದೊರೆತ ನಂತರ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಆ) ಮಂಜೂರಾತಿ ನೀಡಿರುವುದಿಲ್ಲ. ಹಾಗೂ.ಈ ಕಾಮಗಾರಿಯ ಅಂದಾಜು ವೆಚ್ಚ ರೂ.450-00 ಲಕ್ಷ.

ಇ) ಈ ಯೋಜನೆಗೆ ಒದಗಿಸಲಾದ ರೂ.45.00 ಲಕ್ಷದ ಅನುದಾನ ಆಡಳಿತಾತ್ಮಕ ಅನುಮೋದನೆ ನೀಡಲು ಅಗತ್ಯವಿರುವ ಶೇಕಡ 30ಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ತಾಂತ್ರಿಕ ಸಲಹಾ ಸಮಿತಿಯ ಮಂಜೂರಾತಿ ದೊರೆತ ನಂತರ ಅನುದಾನದ ಲಭ್ಯತೆಯ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.